OS 3576/2007
PW1

ಸಾಕ್ಷಿಯನ್ನು ಈಹೊತ್ತು ದಿನಾಂಕ ಃ 08.08.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು .

ಮುಂದುವರೆದ ಪಾಟೀ ಸವಾಲು ಃ 2 , 3 6 , ಮತ್ತು 9 ನೇ ಪ್ರತಿವಾದಿ ಪರ ಶ್ರೀ ಆರ್ ಎ ಎಸ್ ವಕೀಲರಿಂದ ಃ

ಓ ಎಸ್ 16949/06 ನೇ ದನ್ನು 9 ನೇ ಪ್ರತಿವಾದಿ ನನ್ನ ವಿರುದ್ದ ದಾಖಲು ಮಾಡಿದ್ದು ಅದು ಡಿಕ್ರಿಯಾಗಿದೆ ಎಂದರೆ ಸರಿ . ಸಾಕ್ಷಿಯು ಎಕ್ಸ್ ಪಾರ್ಟಿ ಆಗಿದ್ದು ಅರ್ಜಿ ಹಾಕಿರುತ್ತಾರೆ ಎಂದು ಹೇಳುತ್ತಾರೆ . ಓ ಎಸ್ ನಂಬರ್ 139/88 ನೇದನ್ನು ಪುಟ್ಟಮ್ಮರವರು ಮುನಿಕದರಪ್ಪ ಅಂದರೆ 4 ನೇ ಪ್ರತಿವಾದಿಯ ವಿರುದ್ದ ದಾಖಲೆ ದಾವೆ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟಮ್ಮರವರು ದಾವಾ ಆಸ್ತಿಯನ್ನು ನಮಗೆ ಸನ್ 2007 ರಲ್ಲಿ ಮಾರಾಟ ಮಾಡಿದರು ಎಂದರೆ ಸರಿ . ರಾಚನಹಳ್ಳಿ ಸರ್ವೆ ನಂಬರ್ 105/2 ಇದರ ವಿಸ್ತೀರ್ಣ 1 ಎಕರೆ 4 ಗುಂಟೆ ಇರುತ್ತದೆ. ಅದರ ಒಟ್ಟು ಕ್ಷೇತ್ರ ಎಷ್ಟಿತ್ತು ನನಗೆ ಗೊತ್ತಿಲ್ಲ.

2. ನಾನು ಈ ದಾವಾ ದಾಖಲು ಮಾಡುವ ಮೊದಲು 1 , 2 , 3 ಮತ್ತು 9 ನೇ ಪ್ರತಿವಾದಿಯರು ನನ್ನ ವಿರುದ್ದ ದಾವಾ ದಾಖಲು ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಈಗ ಓ ಎಸ್ ನಂಬರ್ 16916/06 ನೇ ದರಲ್ಲಿ ನನ್ನ ವಿಚಾರಣೆ ಆಗಿ ಪಾಟಿ ಸವಾಲು ಆಗಿದೆ ಎಂದರೆ ಸರಿ . ಓ ಎಸ್ ನಂಬರ್ 16948/06 ನೇ ದರಲ್ಲಿ ನನ್ನ ವಿಚಾರಣೆ ಆಗಿದೆ ಎಂದರೆ ಸರಿಯಲ್ಲ. ಪುನಃ ಹೇಳುತ್ತೇನೆ ಆಮೇಲೆ ಆಗಿರುತ್ತದೆ.

3. ದಿ ಃ 05.03.2007 ರಂದು ನಾನು 21 ಗುಂಟೆ ಜಾಗ ಖರೀದಿ ಮಾಡಿರುತ್ತೇನೆ . ನನ್ನ ಕ್ರಯಪತ್ರದಲ್ಲಿ ಅದರ ವಿಸ್ತೀರ್ಣ ಅಷ್ಟೆ ಇರಬಹುದು. ಸದರಿ ಕ್ರಯಪತ್ರದ ಪ್ರಕಾರ 105/2 ಎ ಇರುತ್ತದೆ . ನಾನು ಈ ದಾವೆಯನ್ನು ಸರ್ವೆ ನಂಬರ್ 105/2 ಹಾಕಿರುತ್ತೇನೆ ಎಂದರೆ ಸಾಕ್ಷಿ ಎರಡು ಒಂದೇ ಎಂದು ಹೇಳುತ್ತಾರೆ. ದಾವಾ ಷೆಡ್ಯೂಲುನಲ್ಲಿ ಹಾಗೇ ಬರೆಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ಷೆಡ್ಯೂಲುನಲ್ಲಿ 19 ಗುಂಟೆ ಎಂದು ಬರೆಸಿದೆ ಎಂದರೆ ಸರಿ . ಪಶ್ಚಿಮಕ್ಕೆ ಪುಟ್ಟಮ್ಮನ ಜಾಗ ಎಂದು ಬರೆಸಿರುತ್ತೇನೆ ಆದರೆ ಅವರ ಜಾಗ ಇಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ದಾವಾ ಆಸ್ತಿಯ ಬಗ್ಗೆ ಜಿಪಿಎ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿಯು ನ್ಯಾಯಾಲಯಕ್ಕೆ ಬಂದ ಮೇಲೆ ಗೊತ್ತಾಯಿತು ಎಂದು ಹೇಳುತ್ತಾರೆ.

4. ಪ್ರತಿವಾದಿ 2 , 3 , 6 ಮತ್ತು 9 ರವರು ಸನ್ 1994 ರ ಕ್ರಯಪತ್ರಗಳ ಪ್ರಕಾರ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಆಸ್ತಿ ಕನ್ವರ್ಷನ್ ಆದ ಮೇಲೆ ಲೋಕೇಶ್ ಎನ್ನುವವರು ಮುನಿಕದರಪ್ಪರವರಿಂದ ಪ್ರತಿವಾದಿ 2 , 3 , 6 ಮತ್ತು 9 ರವರಿಗೆ ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ . ಸಾಕ್ಷಿಯು ನ್ಯಾಯಾಲಯಕ್ಕೆ ಬಂದ ಮೇಲೆ ಗೊತ್ತಾಯಿತು ಎಂದು ಹೇಳುತ್ತಾರೆ. ಸದರಿ ಕ್ರಯಪತ್ರಗಳು ತಪ್ಪು ಎಂದು ಪ್ರಶ್ನಿಸಿರುತ್ತೇವೆ . ನಾನು ಹಾಗೇ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2 , 3 , 6 ಮತ್ತು 9 ರವರ ಹೆಸರಿನಲ್ಲಿ ಖಾತಾ ಆಗಿ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

OS 3576/2007
PW1

5. ಸರ್ವೆ ನಂಬರ್ 105/2 ಇದು ಯಾವಾಗ ಪೋಡಿಯಾಯಿತು ಗೊತ್ತಿಲ್ಲ. ನಾನು ಖರೀದಿಸಿದಾಗ ಸದರಿ ಜಮೀನಿನ ಸರ್ವೆ ನಂಬರ್ 105/2 ಇರಲಿಲ್ಲ ಎಂದರೆ ಸಾಕ್ಷಿಯು ಪೋಡಿಯಾಗಿಯೇ ಸರ್ವೆ ನಂಬರ್ 105/2 ಎ ಆಗಿದೆ ಎಂದು ಹೇಳುತ್ತಾರೆ ಯಾವಾಗ ಎಂದು ಗೊತ್ತಿಲ್ಲ. ಸರ್ವೆ ನಂಬರ್ 105/2 ಮತ್ತು ಸರ್ವೆ ನಂಬರ್ 105/2 ಎ ಒಂದೇ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ.

6. ಸರ್ವೆ ನಂಬರ್ 105/2 ಮೊದಲು ಅದರ ವಿಸ್ತೀರ್ಣ 5 ಎಕರೆ 11 ಗುಂಟೆ ಇತ್ತು ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಹೆಚ್ಚಿನ ಪಾಟೀಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .